# ಕಾರ್ಕಳದ ಬಾಹುಬಲಿಗೆ ಮಹಾಮಜ್ಜನ ಸಂಭ್ರಮ



■ ಸಿದ್ಧಾಪುರ ವಾಸುದೇವ ಭಟ್ಟ
ಚಿತ್ರ: ದ್ವಾರಕ

ಕಾರ್ಕಳದ ಬಾಹುಬಲಿಗೆ ಇದೇ ಜನವರಿ 21ರಿಂದ 31ರ ತನಕ 11ದಿನ ಮಹಾಮಸ್ತಕಾಭಿಷೇಕ ನಡೆಯಲಿದೆ. ಆಧುನಿಕ ಜನ ಸಮುದಾಯಕ್ಕೆ ಬಾಹುಬಲಿಯಿಂದ ಶಾಂತಿ, ಅಹಿಂಸೆ ಸಾಮರಸ್ಯಗಳ ಸಂದೇಶ ಸ್ಫೂರ್ತಿ ದೊರೆಯುವ ಆಶಯ ಈ ಉತ್ಸವದ್ದು.

ಕಾರ್ಕಳದ ಬಾಹುಬಲಿ ವಿಗ್ರಹ ಸಮುದ್ರಮಟ್ಟದಿಂದ ಸುಮಾರು 100 ಕಿ.ಮೀ ಎತ್ತರದ ಕರಿಯಕಲ್ಲಿನ ಬೆಟ್ಟದ ಮೇಲೆ ಸ್ಥಾಪಿತವಾಗಿದೆ. ಈ ಏಕಶಿಲಾ ವಿಗ್ರಹ 42 ಅಡಿ ಎತ್ತರ. ಬಾಹುಬಲಿ ಶಿಲ್ಪವನ್ನು ಬಯೋಟೈಟ್ ಮತ್ತು ಕ್ವಾರ್ಜ್ ಖನಿಜಗಳ ಪಟ್ಟಿ ಮಿಶ್ರವಾಗಿರುವ ಸೀಣೆ ಜಾತಿಯ ಗಡಸು ಕಗ್ಗಲ್ಲಿನಲ್ಲಿ ನಿರ್ಮಿಸಲಾಗಿದೆ. ಸುಮಾರು 80 ಟನ್ ಭಾರವಿದೆ. ಇದರ ಶಿಲ್ಪಿ ಶಂಭು ಕಲ್ಕುಡ.

ಎತ್ತರದ ದೃಷ್ಟಿಯಿಂದ ಇದಕ್ಕೆ ದ್ವಿತೀಯ ಸ್ಥಾನವಿದೆ. ವಿಗ್ರಹ ಪ್ರತಿಷ್ಠಾಪನೆಯ ಕುರಿತು ವಿಗ್ರಹದ ಬಲಬದಿಯಲ್ಲಿ ಕನ್ನಡ ಲಿಪಿಯಲ್ಲಿ ಸಂಸ್ಕೃತ ಭಾಷೆಯಲ್ಲಿ ಬರೆಯಲಾದ ಶಾಸನ ಸ್ಪಷ್ಟ ಮಾಹಿತಿ ನೀಡುತ್ತದೆ. ಈ ವಿಗ್ರಹ ಪ್ರತಿಷ್ಠಾಪಿಸಿದ ಎರಡು ಶತಮಾನಗಳ ತರುವಾಯ ಚದುರ ಚಂದ್ರಮ ಕವಿ (1636) ಬರೆದ 'ಕಾರ್ಕಳ ಗೊಮ್ಮಟೇಶ್ವರ ಚರಿತ್ರೆ' ಎಂಬ ಸಾಂಗತ್ಯ ಕೃತಿಯಲ್ಲೂ ಪ್ರತಿಷ್ಠಾಪನೆ ಕುರಿತ ಸವಿವಿರವಾದ ಉಲ್ಲೇಖಗಳು ದೊರೆಯುತ್ತವೆ.

ಕವಿ ಚದುರ ಚಂದ್ರಮ ಮೂರ್ತಿಯನ್ನು ಬೆಟ್ಟದ ಮೇಲಕ್ಕೆ ಸಾಗಿಸುವ ಪರಿಶ್ರಮವನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾನೆ: 'ಮೂರ್ತಿಯ ಸ್ಥೂಲರೂಪ ಕೆತ್ತನೆಯ ನಂತರ ಕಬ್ಬಿಣದ ದಪ್ಪ ಕೀಲುಗಳಿಂದ 20ಗಾಲಿಗಳ ಬಂಡಿಯನ್ನು ನಿರ್ಮಿಸಿ 10ಸಾವಿರ ಸನ್ನೆಗಳಿಂದ ಮೂರ್ತಿಯನ್ನು ಬಂಡಿಗೆ ಸಾಗಿಸಿ ಸಾವಿರಾರು ಜನ ಸೇರಿ ಎಳೆದಿದ್ದಾರೆ. ಆಗ ಅದು ಒಂದು ಮಾರು ಮಾತ್ರ ಸಾಗಿತಂತೆ. ಮರುದಿನ ಸಾವಿರ ರಾಟೆಗಳನ್ನು ಮಾಡಿಸಿ ಬಾಹುಬಲಿ ಹೊತ್ತ ಬಂಡಿ ಬೆಟ್ಟವೇರುವಂತೆ ಮದ್ದಾನೆಗಳಿಂದ ಎಳೆಸುತ್ತಾರೆ. ಆಗ ಅದು ಸುಮಾರು ಏಳೆಂಟು ಮಾರು ಮುಂದುವರಿಯುತ್ತದೆ. ಹೀಗೆ ಒಂದು ತಿಂಗಳು ನಿರಂತರ ಸಾಗಿಸಿದ ಮೇಲೆ ಮೂರ್ತಿ ಬೆಟ್ಟದ ತುದಿ ತಲುಪುತ್ತದೆ. ಅಲ್ಲಿ 22 ಕಂಬಗಳ ಸೊಗಸಾದ ಚಪ್ಪರದಲ್ಲಿ ಮೂರ್ತಿಯನ್ನು ಮಲಗಿಸಿ ಮುಂದಿನ ಕೆತ್ತನೆ ನಡೆಸಲಾಗಿದೆ. ಇದಕ್ಕೆ ಒಂದು ವರ್ಷ ಹಿಡಿದಿದೆ. ನಂತರ ವಿಗ್ರಹದ ಪ್ರತಿಷ್ಠಾಪನೆ ನಡೆಸಲಾಯಿತು.'

ಈ ಬಾಹುಬಲಿಗೆ ಮೊದಲ ಮಸ್ತಕಾಭಿಷೇಕ 1432ರಲ್ಲಿ ಜೈನ ಮಠದ ಲಲಿತಕೀರ್ತಿ ಭಟ್ಟಾರಕರ ಮಾರ್ಗದರ್ಶನದಲ್ಲಿ ಎರಡನೇ ಭೈರವರಾಯನ ನಡೆಸಿದ. 1957ರಲ್ಲಿ ಫೆಬ್ರವರಿಯಲ್ಲಿ ನಿಡ್ಪಳ್ಳಿ ಅನಂತಯ್ಯ ಅರಿಗ ಎನ್ನುವವರು ಬಾಹುಬಲಿಯ ಮಸ್ತಕಾಭಿಷೇಕವನ್ನು 11 ದಿನ ವೈಯಕ್ತಿಕ ಖರ್ಚಿನಲ್ಲಿ ನಿರ್ವಹಿಸಿದ್ದರು ಎಂಬುದು ಉಲ್ಲೇಖನೀಯ.

ಬೃಹತ್ ವಿಗ್ರಹಕ್ಕೆ ಜಲ, ಚಂದನ, ಅಷ್ಟಗಂಧ, ಕಷಾಯ, ಅರಿಶಿಣ, ಎಳನೀರು. ಕಲ್ಕಚೂರ್ಣ, ಕಬ್ಬಿನ ರಸ ಮೊದಲಾದ ದ್ರವ್ಯಗಳಿಂದ ಮಸ್ತಕಾಭಿಷೇಕ ನಡೆಸುವುದು ಪದ್ಧತಿ.